ಮಂಗಳೂರು ಮಹಾನಗರ ಪಾಲಿಕೆಯ ಸಂದಾಯದ ಪಣ

೨೨೦೪. ಶ್ರೀ ಬಿ. ಎಂ. ಇದಿನಬ್ಬ (ಬುಳ್ಳಲ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಂಗಳೂರು ಮಹಾನಗರ ಪಾಲಿಕೆಗೆ ಆಕ್ಟ್ರಾಯ್ ಇನ್ನಿತರ ಬಾಬಿನಿಂದ ಸರ್ಕಾರದಿಂದ ಬಾಕಿ ಇರುವ ಹಣವೆಷ್ಟು ?

ಆ) ಹಣವಿಲ್ಲದೆ ನಗರಪಾಲಿಕೆಯವರ ಕೆಲವು ಕಾಮಗಾರಿಗಳು ಸ್ಥಗಿತಗೊಂಡಿದ್ದು ಸದರಿ ಬಾಕಿ ಇರುವ ಹಣಕ್ಕಾಗಿ ಸರ್ಕಾರಕ್ಕೆ ಮನವಿ ಸಲ್ಲಿಸಿರುವುದು ನಿಜವೇ ?

ಇ) ಹಾಗಿದ್ದಲ್ಲಿ ಈ ಹಣವನ್ನು ಯಾವಾಗ ಸಂದಾಯ ಮಾಡಲಾಗುವುದು ?

ಶ್ರೀ ಎಂ. ಚಂದ್ರ ಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ೧೯೮೭-೮೮ನೇ ಸಾಲಿನ ಮಂಗಳೂರು ನಗರ ಪಾಲಿಕೆಗೆ ನೀಡಬೇಕಾಗಿದ್ದ ಆಕ್ಟ್ರಾಯ್ ಪರಿಹಾರ ಅನುದಾನದ ಬಾಕಿ ಮೊತ್ತವನ್ನು ಬಿಡುಗಡೆ ಮಾಡಲು ಇದೀಗ ಆದೇಶವನ್ನು ಹೊರಡಿಸಲಾಗಿದೆ ಯಾವುದೇ ಬಾಕಿ ಇಲ್ಲ.

(ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಬಿ. ಎಂ. ಇದಿನಬ್ಬ —ಅಧ್ಯಕ್ಷರೆ, ಮಂಗಳೂರು ಮಹಾನಗರ ಪಾಲಿಕೆಗೆ ಸಲ್ಲಬೇಕಾದಂಥ ಹಣದಲ್ಲಿ ೬೩ ಲಕ್ಷ ರೂಪಾಯಿಗಳು ಸಂದಾಯವಾಗಿವೆ ಮತ್ತು ೯೦ ಲಕ್ಷ ರೂಪಾಯಿ ಬಾಕಿ ಇದೆ ಎಂದು ತಿಳಿದು ಬರುತ್ತದೆ. ಅದನ್ನು ಕೊಡುವುದಕ್ಕೆ ಯಾವಾಗ ಆದೇಶವನ್ನು ಹೊರಡಿಸಿದ್ದೀರಿ ?

ಶ್ರೀ ಎಂ. ಚಂದ್ರ ಶೇಖರ್. —ಅವರಿಗೆ ಸಂದಾಯವಾಗ ಬೇಕಾದ ರೂಪಾಯಿ, ೯೩ ಲಕ್ಷದ ೪೩ ಸಾವಿರ ರೂಪಾಯಿಗಳನ್ನು ನಿನ್ನೆ ತಾನೆ ಬಿಡುಗಡೆ ಮಾಡಲಾಗಿದೆ.

ಶ್ರೀ ಬ್ಲೇಸಿಯಸ್ ಡಿಸೋಜ.—ಮಾನ್ಯ ಸಚಿವರು ಆದೇಶ ಹೊರಡಿಸಲಾಗಿದೆ ಎಂದು ಹೇಳಿದ್ದಾರೆ ಹಾಗೇದ ಮೇಲೆ ಈ ಆದೇಶ ಹೊರಡಿಸುವುದಕ್ಕಿಂತ ಮುಂಚೆ ಎಷ್ಟು ಬಾಕಿಯನ್ನು ಕಾರ್ಪೋರೇಷನ್‌ನವರಿಗೆ ಕೊಡಬೇಕಾಗಿತ್ತು ? ಅದನ್ನು ಅವರಿಗೆ ಯಾವಾಗ ಒದಗಿಸುತ್ತೀರಿ ?

ಶ್ರೀ ಎಂ. ಚಂದ್ರ ಶೇಖರ್.—೯೩ ಲಕ್ಷದ ೪೩ ಸಾವಿರ ರೂಪಾಯಿಗಳನ್ನು. ಅಂದರೆ ಬಾಕಿ ಇದ್ದುದನ್ನು ಕಳುಹಿಸಿದ್ದೇವೆ.

ಶ್ರೀ ಬ್ಲೇಸಿಯಸ್ ಡಿಸೋಜ.—ಅದು ನಮ್ಮ ಕಾರ್ಪೊರೇಶನ್‌ಗೆ ಇನ್ನೂ ಮುಟ್ಟಿಲ್ಲ ಯಾವಾಗ ಮುಟ್ಟುತ್ತದೆ ಎಂದು ಹೇಳುತ್ತೀರಾ ?

ಶ್ರೀ ಎಂ. ಚಂದ್ರ ಶೇಖರ್.—ಆ ಬಾಕಿ ಮೊತ್ತವನ್ನು ನಿನ್ನೆ ಬಿಡುಗಡೆ ಮಾಡಿದ್ದೇವೆ ಎಂದು ಈಗಾಗಲೇ ಹೇಳಿದ್ದೇನೆ.

ಶ್ರೀ ಚಂದ್ರಶೇಖರ್ ಮಾಮನಿ ; ಗೈರು ಹಾಜರು

ಶ್ರೀ ಐ. ಬಿ. ಶಂಕರ್ : ಗೈರು ಹಾಜರು

ಬೆಂಗಳೂರು ನಗರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಗಳಲ್ಲಿರುವ ಪ್ರೈವೇಟ್ ಮತ್ತಿತರ ಖಾಸಗಿ ಸೈಟು ಹಂಚಿಕೆಯ ಸೊಸೈಟಿಗಳ ಬಗ್ಗೆ.

೨೨೦೫. ಶ್ರೀ ಆರ್. ವೆಂಕಟರಾಮಯ್ಯ, (ಮುಳಬಾಗಿಲು).—ಮಾನ್ಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನಗಳನ್ನು ಪಡೆಯಲು ಖಾಸಗೀ ಹಾಗೂ ಇತರ ಸಂಘಗಳೆಷ್ಟು ?